## ಭಾಷೆ ಕಲಿಕೆಗೆ ಬೇಬಲ್

ಬಿಡುವಿದ್ದಾಗ ಹೊಸ ಭಾಷೆ ಕಲಿಯುವ ಉತ್ಸಾಹವಿದ್ದವರಿಗೆ ಹಲವಾರು ಅಪ್ಲಿಕೇಶನ್‌ಗಳು ಲಭ್ಯ. ಇವುಗಳಲ್ಲಿ ಬೇಬಲ್ ಇಂಗ್ಲಿಷ್ ಭಾಷಾ ಅಪ್ಲಿಕೇಶನ್ ಆ್ಯಂಡ್ರಾಯ್ಡ್ ಫೋನಿಗೆ ಸೂಕ್ತವಾಗಿದೆ. ಈ ಪ್ಯಾಕೇಜ್‌ನಲ್ಲಿ 3000 ಶಬ್ದಗಳಿವೆ. ಈ ಶಬ್ದಕೋಶವನ್ನು ವಿಭಾಗಗಳಾಗಿ ಮಾಡಲಾಗಿದ್ದು, ದೇಹದ ವಿವಿಧ ಅಂಗಗಳಿಗೆ ಸಂಬಂಧಿಸಿದ ಶಬ್ದಗಳನ್ನು ಕಲಿಯುವವರಿಗೆ, ಸಾಮಾನ್ಯ ಸಂವಹನಕ್ಕೆ ಬೇಕಾದ ಶಬ್ದಗಳನ್ನು ಕಲಿಯುವವರಿಗೆ.. ಹೀಗೆ ಹಲವು ವಿಭಾಗಗಳಿವೆ. ಅವುಗಳಲ್ಲಿ ಉಚ್ಚಾರಣೆ ಕೂಡಾ ಲಭ್ಯ ಹಾಗೂ ಆಫ್‌ಲೈನ್ ಇದ್ದಾಗಲೂ ಸಿಗುತ್ತದೆ.

ಆದರೆ ಪ್ರತಿಯೊಂದು ವಿಭಾಗಕ್ಕೂ ಪ್ರತ್ಯೇಕ ಅಪ್ಲಿಕೇಶನ್ ಇದ್ದು ಮೆನುವಿನಲ್ಲಿ ಎಲ್ಲವೂ ಸೇರಿಕೊಂಡು ಕಿರಿಕಿರಿ ಎನಿಸಬಹುದು. ಬಳಸುವ ಚಾಕಚಕ್ಯತೆ ಇದ್ದರೆ ಬೇಕಾದ್ದನ್ನು ತೆರೆಯುವುದು ಸುಲಭ.



## ಗೂಗ್ಲ್ ಕ್ರೈಸಿಸ್ ರೆಸ್ಪಾನ್ಸ್ ಮ್ಯಾಪ್

ಉತ್ತರಾಖಂಡ ಪ್ರವಾಹ ಪೀಡಿತರಿಗೆ ನೆರವು ನೀಡಲು ಗೂಗ್ಲ್ ಮುಂದೆ ಬಂದಿದೆ. ಅದು ದುರಂತದ ನಕ್ಷೆ ಸಿದ್ಧಪಡಿಸಿದ್ದು, ಇದು ಯಾವ ಪ್ರದೇಶಗಳು ಪ್ರವಾಹ ಪೀಡಿತ, ಪರಿಹಾರ ಕೇಂದ್ರಗಳು ಎಲ್ಲಿವೆ, ವೈದ್ಯಕೀಯ ನೆರವು ಕೇಂದ್ರಗಳು ಹಾಗೂ ಸಮೀಪ ಇರುವ ರಸ್ತೆಗಳ ವಿವರಗಳನ್ನು ತಕ್ಷಣ ನೀಡುತ್ತದೆ. ಇದು ಅಲ್ಲಿ ಪರಿಹಾರ ಕಾರ್ಯಗಳಲ್ಲಿ ನಿರತರಾಗಿರುವ ಏಜೆನ್ಸಿಗಳಿಗೆ ಸಹಾಯಕವಾಗಿದ್ದು, ಆಗಾಗ ಹೊಸ ಹೊಸ ಮಾಹಿತಿಗಳನ್ನೂ ಸೇರಿಸಲಾಗುತ್ತದೆ. ಹಿಂದಿ ಮತ್ತು ಇಂಗ್ಲಿಷ್ ಎರಡರಲ್ಲೂ ಲಭ್ಯ.

ಈ ವೆಬ್ ಅಪ್ಲಿಕೇಶನ್‌ನಲ್ಲಿ ಎರಡು ವಿಭಾಗಗಳಿವೆ. 'ಐ ಆ್ಯಮ್ ಲುಕಿಂಗ್ ಫಾರ್ ಸಮ್‌ಒನ್' ಮತ್ತು 'ಐ ಹ್ಯಾವ್ ಇನ್‌ಫಾರ್ಮೇಶನ್ ಆನ್ ಸಮ್‌ಒನ್'. ಬಳಕೆದಾರರಿಗೆ ಮಾಹಿತಿ ಗೊತ್ತಿದ್ದರೆ, uttarakhand- crisis@googlegroups.com ಗೆ ಬರೆಯಬಹುದು.





## ಬ್ಲೂಟೂಥ್ ಟೈಲ್

ಮರೆಗುಳಿಗಳಾ? ಮನೆಯ ಕೀಲಿಕೈ, ಬೈಕ್, ನಾಯಿ.. ಹೀಗೆ ಕಳೆದುಕೊಂಡಿರುವ ವಸ್ತುಗಳನ್ನು ಹುಡುಕಲು ಬ್ಲೂಟೂಥ್ ಟೈಲ್ ನಿಮ್ಮ ನೆರವಿಗೆ ಬಂದಿದೆ. ಈ ಟೈಲ್ ಅನ್ನು ಕೀಲಿಕೈ, ಬೈಕ್ ಮೊದಲಾದವುಗಳಿಗೆ ಅಂಟಿಸಿ. ಇದು ಬ್ಲೂಟೂಥ್ ಮೂಲಕ ಐಫೋನ್, ಐಪ್ಯಾಡ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತದೆ. ಇದರಲ್ಲಿರುವ ಟೈಲ್ ಐಒಎಸ್ ಅಪ್ಲಿಕೇಶನ್‌ನಿಂದ ನೀವು ಕಳೆದುಕೊಂಡಿರುವ ಕೀಲಿಕೈಗೆ ಎಷ್ಟು ಸಮೀಪದಲ್ಲಿದ್ದೀರಿ ಎಂಬುದನ್ನು ಕೂಡಾ ತಿಳಿಸುತ್ತದೆ. ಕೀಲಿಕೈಗೆ ಅಂಟಿಸಿದ ಟೈಲ್ ಸಮೀಪವಾದಂತೆ ಅದರಲ್ಲಿರುವ ಸ್ಪೀಕರ್‌ನಿಂದ ಶಬ್ದ ಹೊರಹೊಮ್ಮುತ್ತದೆ. 150 ಅಡಿ ವ್ಯಾಪ್ತಿಯಲ್ಲಿ ಉತ್ತಮವಾಗಿ ಕೆಲಸ ಮಾಡುತ್ತದೆ. ಅದರಾಚೆ ಕಳೆದುಕೊಂಡಿದ್ದರೆ, ಬೇರೆ ಟೈಲ್ ಬಳಕೆದಾರರು ಪತ್ತೆ ಮಾಡಬಹುದು, ಆದರೆ ನೀವು ಅವರ ಜೊತೆ ಈ ಅಪ್ಲಿಕೇಶನ್ ಅನ್ನು ಶೇರ್ ಮಾಡಿದರೆ ಮಾತ್ರ.





## ಟ್ಯಾಪ್ ಟು ಡು

ಇದು ಗೂಗ್ಲ್ ಟಾಸ್ಕ್ ಲಿಸ್ಟ್‌ನಂತೆಯೇ ಕೆಲಸ ಮಾಡುತ್ತದೆ. ದಿನದ ಕೆಲಸಗಳನ್ನು ಈ ಅಪ್ಲಿಕೇಶನ್‌ನಲ್ಲಿ ಸೇರಿಸಬಹುದು. ನೀವು ಕಂಪ್ಯೂಟರ್‌ನಲ್ಲಿ ಕೆಲಸ ಮಾಡುತ್ತಿರಲಿ ಅಥವಾ ಕಚೇರಿಗೆ ತೆರಳುತ್ತಿರಲಿ, ನೀವು ಮಾಡಬೇಕಾದ ಕೆಲಸಗಳನ್ನು ನೆನಪಿಸುತ್ತಿರುತ್ತದೆ. ಜೊತೆಗೆ ಈ ಅಪ್ಲಿಕೇಶನ್‌ಗೆ ಪಾಸ್‌ವರ್ಡ್ ಕೂಡಾ ಲಭ್ಯ. ಐಟ್ಯೂನ್‌ನಿಂದ ಉಚಿತವಾಗಿ ಡೌನ್‌ಲೋಡ್ ಮಾಡಬಹುದು.

■ ಎಸ್. ತುಂಬೆ